ಆಕಾಶ ಮುರಿದು ಬಿತ್ತೋ ಫಳಫಳಾ ಗುಡುಗುವಂಗೆ
ಕಣ್ಣು ಕೋರೈಸೋ ಮಿಂಚು ತಳತಳ ಹೊಳೆಯುವಂಗೆ ॥
ಬಿರುಗಾಳಿ ದುಮ್ಮುದೂಳು ಸುತ್ತಿ ಚಿಮ್ಮಿ ಬಂದಂಗೆ
ಕವಿದ ಕಾರ್ ಮೋಡಗಳು ಗಗನ ತುಂಬಿ ನಿಂದಂಗೆ ॥

ಸಿಡಿಲು ಸಿಡಿದು ಸೀಳಿ ಬ್ರಹ್ಮಾಂಡವೆ ಬಿರಿದಂಗೆ
ಮಹಾಪ್ರಳಯವಾದಂಗೆ ಲೋಕವೇ ಬದಲಾದಂಗೆ ॥
ಹರಿದು ಹರಿದು ಹರಿದು ಗಂಗೆ ನೆರೆಯುಕ್ಕಿದಂಗೆ
ಮರಳಿ ಮರಳಿ ಮರಳಿ ಗಂಗೆ ಇಳೆಗೆ ಇಳಿದಂಗೆ ॥

ಆಕಾಶದಿಂದ ಗಂಗೆ ಬುವಿಗೆ ತಾನು ಬಾಗಿದಂಗೆ
ಪಾತಾಳವೇ ಮೇಲಕ್ಕೆದ್ದು ಕರಗಳನು ಚಾಚಿದಂಗೆ ॥
ಹರಡಿ ತನ್ನ ಜಟೆಗಳನು ನೀಲಕಂಠ ನಿಂತ ಭಂಗಿ
ಧುಮ್ಮಿಕ್ಕುವುದನು ಮರೆತಂಗೆ ಬೆರಗಾದಳೋ ಸುರಗಂಗೆ ॥

ಎಲೆಲೆ ಎಂಥ ಅಂದಗಾರ ಎಂಥ ಚೆಲುವ ಮಾಟಗಾರ
ಮನವು ಕರಗಿ ನೀರಾಯ್ತು ಕಂಡ ಚಣವೇ ಚಂದ್ರಧರ ॥
ಕನ್ನೆ ಇವಳ ಕೆನ್ನೆ ಮೇಲೆ ಸಿಗ್ಗು ಚವರಿ ಬೀಸಿದಂಗೆ
ಓರೆ ಕಣ್ಣ ನೋಟ ಸೋಂಕಿ ಬೆವರ ಹನಿ ಜಳಕದಂಗೆ ॥
ಬಲಗಾಲನು ಮುಂದಿಡಲು ಸಂದೇಹವು ಮನದೊಳಗೆ
ಶುಭವಾಗಲಿ ಎನ್ನುವಂಗೆ ಮೊಳಗಿತು ಕಾಲಂದುಗೆ ॥

ಉತ್ಸಾಹದಿಂದ ಗಂಗೆ ತಲೆಯಮೇಲೆ ಸುರಿದಂಗೆ
ಮನೋಹರನ ಕೇಶರಾಶಿ ಪಾಶವಾಗಿ ಹಬ್ಬಿದಂಗೆ ॥
ದಿಕ್ಕು ದಿಕ್ಕಿಗೂ ಹರನು ಜಟೆಯುಬಲೆನು ಹೆಣೆದಂಗೆ
ದಿಕ್ಕು ತಪ್ಪಿ ಅಲೆಯುವಂಗೆ ಮುಂದುಗಾಣಳು ಗಂಗೆ ॥

ಕುರುಳನು ಗಂಟು ಕಟ್ಟಿ ಹರ ಜಟೆಯ ಮುಡಿಯಕಟ್ಟಿ
ಕಣ್ಣುಗಾಣದಾದ ಗಂಗೆ ಕಳ್ಳದಾರಿ ಹುಡುಕುವಂಗೆ ॥
ಕತ್ತಲಿಡಗಿ ಕಣ್ಣೊಳಗೆ ಏನು ಕಾಣದಾಯಿತಲ್ಲಾ
ಕುರುಳು ಸರಿಸಿ ನೋಡಲಲ್ಲಿ ಬೆಳದಿಂಗಳೇ ಹೊಳೆವಂಗೆ ॥

ವಿಸ್ಮಯದ ಒಳಗೆ ತಾನೇ ಮುಳುಗಿ ಹೋದಳು ಗಂಗೆ
ಜಟಾ ಜೂಟನ ಮುಂದೆ ಶಿವಲೋಕವೆ ಹೊಳವಂಗೆ ॥
ಮಂದ್ರಸ್ವರದಿ ಕೇಳಿಹದು ನಮಕ ಚಮಕಂ ಮಂತ್ರ
ತೋರುತಿಹದು ಜಗವು ರಸಪಾಕದಂತೆ ಸಾಂದ್ರ ॥

